**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,**
**ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ 06, ಬೀದರ–585 401, ಕರ್ನಾಟಕ**

ಸಂಖ್ಯೆ: ಕುಸ/ಶೈವಿ/ಕಪಪಮೀವಿವಿ/2017–18/ ದಿನಾಂಕ:23–03–2018

# ಪ್ರಕಟಣೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ ಅಡಿಯಲ್ಲಿ ಬರುವ ಪರೀಕ್ಷಾ ಕೇಂದ್ರಗಳಲ್ಲಿ ಕೃಷಿಕರ ಮಕ್ಕಳಿಗೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರಿಂದ ದಿನಾಂಕ:**27–04–2018** ರಂದು **ಬೆ.9.00** ಗಂಟೆಯ ನಂತರ ನಿಯೋಜಿಸಿದ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಈ ನಿಬಂದನೆಗಳನ್ನು ಪಾಲಿಸುವುದು.

- **ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ** (Code No. 6A) ಪರೀಕ್ಷಾ ಕೇಂದ್ರದಲ್ಲಿ **ಬೀದರ** ಮತ್ತು **ಗುಲಬರ್ಗಾ** ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗುವುದು.
- **ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು** (Code No. 6B) ಪರೀಕ್ಷಾ ಕೇಂದ್ರದಲ್ಲಿ **ರಾಮನಗರ** ಮತ್ತು **ತುಮಕೂರು** ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗುವುದು.
- **ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು** (Code No. 6C) ಪರೀಕ್ಷಾ ಕೇಂದ್ರದಲ್ಲಿ **ದಕ್ಷಿಣಕನ್ನಡ, ಉಡುಪಿ** ಮತ್ತು **ಕೊಡಗು** ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗುವುದು.

ಮುಂದುವರೆದು, ಸಂಬಂಧಿಸಿದ ಅಭ್ಯರ್ಥಿಗಳು ದಿನಾಂಕ:21–04–2018 ರಿಂದ 25–04–2018 ರ ಒಳಗಾಗಿ ಈ ಕೆಳಕಂಡ ಕ್ರಮಸಂಖ್ಯೆ–1 ರಿಂದ 6 ವರೆಗಿನ ಅವಶ್ಯ ಮೂಲ ದಾಖಲೆಗಳು ಹಾಗೂ ನಕಲು ಪ್ರತಿಗಳೊಂದಿಗೆ ಮೇಲೆ ತಿಳಿಸಿದ ಆಯಾ ಕೇಂದ್ರದಲ್ಲಿ ಬೆ.9.00 ರಿಂದ ಮಧ್ಯಾಹ್ನ 4.00 ರವರೆಗೆ **ಪರಿಶೀಲನೆ** ಮಾಡಿಸತಕ್ಕದ್ದು.

1. CET ಪರೀಕ್ಷಾ ಪತ್ರ (Hall Ticket)
2. ವ್ಯವಸಾಯಗಾರರ ಪ್ರಮಾಣಪತ್ರ–3, ತಹಶೀಲ್ದಾರರ ಸಹಿ ಹಾಗೂ ಮೊಹರಿನೊಂದಿಗೆ (ಅವಿಭಕ್ತ ಕುಟುಂಬವಾದಲ್ಲಿ ಕಂದಾಯ ಇಲಾಖೆಯಿಂದ ಒದಗಿಸುವ ವಂಶವೃಕ್ಷ ಪ್ರಮಾಣಪತ್ರ)
3. ವೇತನ ದೃಢೀಕರಣ ಪ್ರಮಾಣಪತ್ರ–4 (ಪೋಷಕರು ಸರಕಾರಿ ವೃತ್ತಿಯಲ್ಲಿದ್ದಲ್ಲಿ)
4. ಖಾಸಗಿ ವೃತ್ತಿಯಿಂದ ಆದಾಯ ಪತ್ರ–5 (ಪೋಷಕರು ಖಾಸಗಿ ವೃತ್ತಿಯಲ್ಲಿದ್ದಲ್ಲಿ)
5. ಅಫಿಡೆವಿಟ್ (ಪೋಷಕರು ಸರಕಾರಿ/ಖಾಸಗಿ ವೃತ್ತಿಯಲ್ಲಿದ್ದಲ್ಲಿ)
6. The Comptroller, KVAFSU, Bidar ಇವರ ಹೆಸರಿನಲ್ಲಿ ತೆಗೆದ ಡಿ.ಡಿ. ರೂ.500/– (ಸಾಮಾನ್ಯ & ಓಬಿಸಿ) (ರೂ.250/– ಎಸ್.ಸಿ/ಎಸ್.ಟಿ/ಪ್ರವರ್ಗ–1). ಡಿ.ಡಿಯನ್ನು ದಿ:02–04–2018 ರಿಂದ 25–04–2018 ರೊಳಗೆ ತೆಗೆದಿರಬೇಕು.

ಅಭ್ಯರ್ಥಿಗಳು ಇವುಗಳನ್ನು ದಿನಾಂಕ :25–04–2018 ರ ಒಳಗೆ ಹಾಜರಪಡಿಸಿ, ದಿನಾಂಕ:27–04–2018 ರಂದು ನಡೆಯುವ ಪ್ರಾಯೋಗಿಕ ಪರೀಕ್ಷೆಗೆ ಹಾಲ್ ಟಿಕೆಟ್ ಪಡೆಯಬಹುದಾಗಿದೆ.

**ಸೂಚನೆ:**

- ದಿನಾಂಕ:21–04–2018 ರಿಂದ 25–04–2018 ರ ಒಳಗೆ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದ ವಿದ್ಯಾರ್ಥಿಗಳಿಗೆ 27–04–2018 ರಂದು ಪ್ರಾಯೋಗಿಕ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.
- ಮೇಲೆ ತಿಳಿಸಿದ ಜಿಲ್ಲೆಗಳನ್ನು ಹೊರತುಪಡಿಸಿ, ಬೇರೆ ಜಿಲ್ಲೆಯ ಅಭ್ಯರ್ಥಿಗಳ ದಾಖಲಾತಿ ಪರಿಶೀಲಿಸಲಾಗುವುದಿಲ್ಲ ಮತ್ತು ಪ್ರಾಯೋಗಿಕ ಪರೀಕ್ಷೆಗೆ ಅವಕಾಶವಿರುವುದಿಲ್ಲ.
- ವಿದ್ಯಾರ್ಥಿಗಳು / ತಂದೆ, ತಾಯಿ / ಪೋಷಕರು ಇವರುಗಳಲ್ಲಿ ಯಾರಾದರೂ ಬಂದು ಮೂಲ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳಬಹುದು.

**ಆದೇಶದ ಮೇರೆಗೆ**
**ಸಹಿ/–**
**(ಪ್ರೊ.(ಡಾ).ಎಚ್.ಶಿವಾನಂದ ಮೂರ್ತಿ)**
**ಕುಲಸಚಿವರು**